(ii) ಹಿರಿಯೂರು ತಾಲ್ಲೂಕಿನ ಹೂವಿನ ಹೊಳೆ ಗ್ರಾಮಕ್ಕೆ ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ ನೀರಿನ ತೊಟ್ಟಿಯನ್ನು ಕಟ್ಟುವುದು.

ಶ್ರೀ ಆರ್. ರಾಮಯ್ಯ (ಹಿರಿಯೂರು).—ಹಿರಿಯೂರು ತಾಲ್ಲೂಕಿನ ಹೂವಿನ ಹೊಳೆ ಗ್ರಾಮಕ್ಕೆ ಗ್ರಾಮಾಂತರ ನೀರು ಸರಬರಾಜು ಯೋಜನೆಯು (ಎನ್‌ಕ್ಯೂಡಬ್ಲ್ಯೂಎಸ್) ೧೯೬೦–೬೧ರಲ್ಲಿ ಮಂಜೂರಾಗಿರುವುದು ಸರಿಯಷ್ಟೆ. ಈಗಾಗಲೇ ಯೋಚಿತ ರೀತಿಯಲ್ಲಿ ಸಾರ್ವಜನಿಕ ಹಾಗೂ ವೈಯಕ್ತಿಕ ನಲ್ಲಿಗಳನ್ನು ಅಳವಡಿಸಿ ನಿರೀಕ್ಷಿಸಿದ ನೀರು ದೊರೆತಿರುವುದರಿಂದ ಅದರ ಸಂಗ್ರಹಣೆಗಾಗಿ ಅದರ ಗಾತ್ರಕ್ಕನುಗುಣವಾಗಿ ತೊಟ್ಟಿಯನ್ನು ಕಟ್ಟಲು ಕೆಲಸವು ಪ್ರಾರಂಭವಾಗಿದೆ. ಆದರೆ ಈ ತೊಟ್ಟಿ ಕಟ್ಟುವ ಕೆಲಸ ಈತನಕ ಪೂರ್ಣಗೊಳ್ಳದೇ ಹೋಗಿರುವುದು ದುರದೃಷ್ಟಕರ. ಅದಾಗ್ಯೂ ಈ ತೊಟ್ಟಿಯ ನಿರೀಕ್ಷಣೆಯಲ್ಲಿ ಇರದೆ ಇಲಾಖೆಯು ನೇರವಾಗಿ ನೀರನ್ನು ಸರಬರಾಜು ಮಾಡುತ್ತಿದೆ ಇದರಿಂದಾಗಿ ವಿದ್ಯುತ್ ಇಲ್ಲದೇ ಇರುವ ಈ ದುರ್ದಿನಗಳಲ್ಲಿ ನಲ್ಲಿಗಳ ಮುಖೇನ ನೀರು ಸರಬರಾಜಾಗದಿರುವುದು ಹಳ್ಳಿಗರ ಕುಡಿಯುವ ನೀರಿಗೆ ದೊಡ್ಡ ಕುತ್ತಾಗಿ ಪರಿಣಮಿಸಿದೆ. ಇದರ ಬಗ್ಗೆ ಸಾಕಷ್ಟು ಗಮನ ಹರಿಸುವಂತೆ ಇಲಾಖೆಯನ್ನು ಒತ್ತಾಯಿಸಿದ್ದಾಗಿದೆ. ಆದಾಗ್ಯೂ ಈ ತೊಟ್ಟಿ ಕಟ್ಟುವ ಕೆಲಸವನ್ನು ಈವರೆಗೂ ಪೂರ್ಣಗೊಳಿಸಲಾಗಿಲ್ಲ. ಹಿಂದೊಮ್ಮೆ ಇದರ ಕಂಟ್ರಾಕ್ಟದಾರನನ್ನು ಬದಲಿಸಿರುವುದಾಗಿ ತಿಳಿಸಿ ಮತ್ತೆ ಅವರೇ ಮಾಡಿಕೊಡುವರೆಂದು ಅವರನ್ನು ನೇಮಿಸಿ ವಿಳಂಬ ಮಾಡುತ್ತಿರುವರು. ಇದರಿಂದಾಗಿ ಈ ಕಂಟ್ರಾಕ್ಟದಾರರು ಅಂದು ನಿಗದಿಪಡಿಸಿದ್ದ ಎನ್.ಆರ್.ಗೆ ಪರ್ಯಾಯವಾಗಿ ಇಂದಿನ ಎಸ್.ಆರ್.ನ್ನು ಹೆಚ್ಚಿಸಿಕೊಡುವಂತೆಯೂ ಸಾಲದ್ದಕ್ಕೆ ಬೇರೆಯವರು ಮಾಡಲು ಮುಂದಾದರೂ ಬಿಟ್ಟುಕೊಡದಿರುವ ಫಲ ಇವುಗಳು ಒಟ್ಟಾಗಿ ಯಾವ ಜನಕ್ಕೆ ಈ ನೀರಿನ ಉಪಯೋಗದ ನಿರೀಕ್ಷೆಯನ್ನು ಪಡೆಯಬಹುದಾಗಿತ್ತು ಅವರಿಗೆ ತೊಂದರೆಯಾಗುತ್ತಿದೆ. ಜೊತೆಗೆ ಈ ಕಂಟ್ರಾಕ್ಟದಾರರು ಆಳುವ ಪಕ್ಷದ ಸಕ್ರಿಯ ಸದಸ್ಯರೆಂಬ ಕಾರಣದಿಂದ ಅವರಿಗೆ ಔದಾರ್ಯ ತೋರುತ್ತಿರುವುದು ಕಾಣುತ್ತದೆ. ಇದರ ನಿವಾರಣೆಯನ್ನು ಸರ್ಕಾರ ಬಗೆಹರಿಸುವ ವಿಳಂಬದ ನೀತಿ ಜನಕ್ಕೆ ತಲೆಶೂಲೆಯಾಗಿದೆ. ಪ್ರಯುಕ್ತ ಕೂಡಲೇ ಈ ತೊಟ್ಟಿ ಕಟ್ಟುವ ಕೆಲಸವನ್ನು ಪೂರ್ಣ ಮಾಡಿಸಲು ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮವೇನು ?

ಶ್ರೀ ಡಿ.ಬಿ. ಇನಾಂದಾರ್ (ಆರೋಗ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರು ಓವರ್ ಹೆಡ್ ಟ್ಯಾಂಕ್ ಕಟ್ಟಲು ವಿಳಂಬ ಆದುದನ್ನು ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಈಗ ಅದು ತೊಂದರೆ ಇಲ್ಲದೇ ಇದ್ದ ಹಾಗೆ ಕೆಲಸ ನಡೆದಿದೆ. ಅದರಲ್ಲಿ ಇನ್ನಾವುದಾದರೂ ತಾಂತ್ರಿಕ ತೊಂದರೆ ಇದ್ದಲ್ಲಿ ಅದನ್ನು ಸಂಪೂರ್ಣವಾಗಿ ನಿವಾರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

(iii) ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ನಿಗದಿ ಮಾಡುವುದು

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕದಲ್ಲಿ ೧ ಕೋಟಿ ಬಡವರು ಅಸಂಘಟಿತ ಕಾರ್ಮಿಕರಾಗಿ ಬೀಡಿ, ಹೆಂಚು, ಗಾರೆ ಕೆಲಸ, ಕೃಷಿ ಕಾರ್ಮಿಕರಾಗಿ ಮತ್ತಿತರ ರೀತಿಯಲ್ಲಿ ಜೀವನ ನಡೆಸಲು ದುಸ್ತರವಾಗಿ ಬದುಕು ಭಾರವಾಗಿ ಈ ಕನಿಷ್ಟ ವೇತನವಿಲ್ಲದೆ ಜೀವನ ನಡೆಸಲು ಕನಿಷ್ಟ ಅನುಕೂಲಗಳಿಲ್ಲದೆ ಕೊರಗಿ ಕೊರಗಿ ಪ್ರಾಣ ಬಿಡದೆ ತಾವು ತಮ್ಮ ಸಂಸಾರದ ಎಲ್ಲಾ ಸದಸ್ಯರು ತಮ್ಮ ಮಕ್ಕಳು ಕೂಡ ವಿದ್ಯಾಭ್ಯಾಸದ ಸೌಲಭ್ಯವಿಲ್ಲದೆ ಬಾಲಕರೆಲ್ಲಾ ಯಾವುದೋ ಒಂದು ಉದ್ಯಮಗಳಲ್ಲಿ ದಿನಕ್ಕೆ ೧ ಅಥವಾ ೨ ರೂಪಾಯಿಗಳ ಕೂಲಿಗೆ ಹೋಗುತ್ತಿರುವುದು ಸರ್ವಸಾಮಾನ್ಯವಾಗಿದೆ.

ಈ ವರ್ಗಕ್ಕೆ ಕನಿಷ್ಟ ಮಾಹೆಯಾನ ೫೦೦ ರೂಪಾಯಿಗಳ ಕನಿಷ್ಟ ವೇತನವಿರಬೇಕೆಂಬ ಕಾರ್ಮಿಕರ ಬಡವರ ಕೂಗು ಅವರ ಹೋರಾಟಗಳು ಸರ್ಕಾರದ ಗಮನವನ್ನು ಸೆಳೆಸಿ ಅವರ ನ್ಯಾಯವಾದ ಬೇಡಿಕೆಗಳು ಈಡೇರಿಲ್ಲ. ಇದು ಅಂಥ ಬಡ ಜನತೆಗೆ ಶೋಷಿತ ವರ್ಗಕ್ಕೆ ಮಾಡಿರುವ ಅಕ್ಷಮ್ಯ ಅಪರಾಧ ಇದನ್ನು ಸರ್ಕಾರಕ್ಕೆ ಅರ್ಪಿಸಲು ಕರ್ನಾಟಕಾದ್ಯಂತ ೩–೩–೧೯೮೬ ರಂದು ಬೆಂಗಳೂರಿನಲ್ಲಿ ವಿಧಾನಸೌಧಕ್ಕೆ ತಮ್ಮ ಮಾನವಿಯನ್ನು ಸಲ್ಲಿಸಲು ಬರುತ್ತಿದ್ದಾರೆ.

ಇವರ ಬೇಡಿಕೆಗಳು ಕನಿಷ್ಟವಾದವು ಒಪ್ಪತಕ್ಕವು ಇವರ ಸಾಮಾಜಿಕ ಪರಿಸ್ಥಿತಿ ಸುಧಾರಿಸದೆ ಕರ್ನಾಟಕದ ಅಭಿವೃದ್ಧಿಯಿಲ್ಲ ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವು ತಂತ್ತು ಮಾಹೆಯಾನ ೫೦೦